# ಎಸ್. ಎಸ್. ಎಲ್. ಸಿ – ವಾರ್ಷಿಕ ಪರೀಕ್ಷಾ ಪೂರ್ವ ತಯಾರಿ–2021

## ಪತ್ರಿಕೆ–01

# ವಿಷಯ: ಪ್ರಥಮ ಭಾಷೆ – ಕನ್ನಡ

## ವಿಷಯ ಸಂಕೇತ: 01 K

ಸಿ.ಸಿ.ಇ– ಅಭ್ಯರ್ಥಿಗಳಿಗಾಗಿ

ಸಮಯ : 40 ನಿಮಿಷಗಳು ಗರಿಷ್ಠ ಅಂಕಗಳು : 40

---

**ಸೂಚನೆಗಳು**

1. ಈ ಪ್ರಶ್ನೆ ಪತ್ರಿಕೆಯಲ್ಲಿ ಒಟ್ಟು 40 ಬಹು ಆಯ್ಕೆ ಪ್ರಶ್ನೆಗಳಿವೆ.

2. ಪ್ರತಿಯೊಂದು ಪ್ರಶ್ನೆಗೆ 1 ಅಂಕಗಳು.

3. ಪ್ರತಿ ಪ್ರಶ್ನೆಗೆ 4 ಉತ್ತರಗಳನ್ನು ನೀಡಲಾಗಿದ್ದು, ಅತಿ ಸೂಕ್ತವಾದ ಉತ್ತರವನ್ನು ಆಯ್ಕೆ ಮಾಡಿ ಗುರುತಿಸುವುದು.

4. ನಿಧಾನವಾಗಿ ಓದಿ ಸರಿ ಎನಿಸುವ ಉತ್ತರವನ್ನು ಮಾತ್ರ ಗುರುತು ಮಾಡುವುದು.

**01. ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವಸ್ವರಗಳ ಸಂಖ್ಯೆ;**

ಎ) 13

ಬಿ) 09

ಸಿ) 07

ಡಿ) 06

**02. ಲೋಪಸಂಧಿಗೆ ಉದಾಹರಣೆ;**

ಎ) ಕೈಯನ್ನು

ಬಿ) ಊರೂರು

ಸಿ) ಮಳೆಗಾಲ

ಡಿ) ಮಹಾತ್ಮ

**03. "ಬೆಟ್ಟದಾವರೆ" ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ**

ಎ) ತತ್ಪುರುಷ ಸಮಾಸ

ಬಿ) ಕರ್ಮಧಾರೆಯ ಸಮಾಸ

ಸಿ) ದ್ವಿಗು ಸಮಾಸ

ಡಿ) ಅಂಶಿ ಸಮಾಸ

**04. "ಬಳೆಗಾರ ಪದವು" ಈ ವ್ಯಾಕರಣಾಂಶಕ್ಕೆ ಉದಾಹರಣೆ**

ಎ) ತದ್ಧಿತಾಂತ ನಾಮ

ಬಿ) ತದ್ದಿತಾಂತ ಭಾವನಾಮ

ಸಿ) ತದ್ದಿತಾಂತಾವ್ಯಯ

ಡಿ) ಕೃದಂತ ನಾಮ

**05. ಆತನು ಎದ್ದು ನಿಲ್ಲಲು ಪ್ರಯತ್ನಿಸಿದನು –ಈ ವಾಕ್ಯದಲ್ಲಿ ಸರ್ವನಾಮ ಪದ**

ಎ) ಎದ್ದು

ಬಿ) ನಿಲ್ಲಲು

ಸಿ) ಪ್ರಯತ್ನ

ಡಿ) ಆತನು

**06. ಪಾರಿಭಾಷಿಕ ಮತ್ತು ಅನ್ಯಭಾಷೆಯ ಪದಗಳನ್ನು ಬಳಸುವಾಗ ಉಪಯೋಗಿಸುವ ಲೇಖನ ಚಿಹ್ನೆ;**

ಎ) ಅರ್ಧ ವಿರಾಮ

ಬಿ) ಅಲ್ಪವಿರಾಮ ಚಿಹ್ನೆ

ಸಿ) ವಾಕ್ಯವೇಷ್ಟನ ಚಿಹ್ನೆ

ಡಿ) ವಿವರಣಾತ್ಮಕ ಚಿಹ್ನೆ

**07. 'ವಾಸಿ' ಪದದ ಸಮನಾರ್ಥಕ ಪದ ಇದು;**

ಎ) ಪ್ರತಿಜ್ಞೆ

ಬಿ) ಕೈ ಕೊಡು

ಸಿ) ಸತ್ಯ ಹೇಳು

ಡಿ) ಚೆನ್ನಾಗಿರು

**08. ನಡುನಡುವೆ : ದ್ವಿರುಕ್ತಿ : : ಚಟಚಟ : ------**

ಎ) ಜೋಡುನುಡಿ.

ಬಿ) ದ್ವಿರುಕ್ತಿ

ಸಿ) ಅನುಕರಣಾವ್ಯಯ

ಡಿ) ಪಡೆನುಡಿ

**09. ಸೀತೆಯ ಮುಖ ಕಮಲದಂತೆ ಅರಳಿತು – ಈ ವಾಕ್ಯದಲ್ಲಿನ ಅಲಂಕಾರ**

ಎ) ರೂಪಕಾಲಂಕಾರ

ಬಿ) ಉಪಮಾಲಂಕಾರ

ಸಿ) ಉತ್ಪ್ರೇಕ್ಷೆ ಅಲಂಕಾರ

ಡಿ) ದೃಷ್ಟಾಂತ ಅಲಂಕಾರ

**10. ಕಂದ ಪದ್ಯದಲ್ಲಿ ಇರುವ ಪಾದಗಳ ಸಂಖ್ಯೆ;**

ಎ) 4

ಬಿ) 6

ಸಿ) 2

ಡಿ) 3

**11. ಬ್ಲಾಕ್ ಔಟ್ ನಿಯಮವನ್ನು ಪಾಲಿಸುವುದು ಏಕೆ ?**

ಎ) ಹುಲಿಯ ದಾಳಿಯಿಂದ ರಕ್ಷಿಸಿಕೊಳ್ಳಲು

ಬಿ) ವಿಮಾನ ದಾಳಿಯಿಂದ ತಪ್ಪಿಸಿಕೊಳ್ಳಲು

ಸಿ) ಹಕ್ಕಿಯ ದಾಳಿಯಿಂದ ತಪ್ಪಿಸಿಕೊಳ್ಳಲು

ಡಿ) ಕುದುರೆಯಿಂದ ತಪ್ಪಿಸಿಕೊಳ್ಳಲು

**12. ರಾಮಲಕ್ಷ್ಮಣರನ್ನು ಮತಂಗಾಶ್ರಮಕ್ಕೆ ಬರಲು ದಾರಿ ಸೂಚಿಸಿದವರು;**

ಎ) ದನು ಮಹರ್ಷಿ

ಬಿ) ಮನೆ ಮಂಚಮ್ಮ.

ಸಿ) ಕವಿ ಸಿದ್ದಲಿಂಗಯ್ಯ.

ಡಿ) ಧರ್ಮಾಧಿಕರಣರು.

**13. ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆ;**

ಎ) ವಾರಾಹಿ

ಬಿ) ಜೋಗ್

ಸಿ) ಕೈಗಾ

ಡಿ) ಶಿವನಸಮುದ್ರ

**14. "ವಿಧಿ ಆಹಾರಕ್ಕೆ ಏನನ್ನು ಒದಗಿಸುವದೋ" ಎಂದು ಯೋಚಿಸಿದವರು;**

ಎ) ಹುಲಿ

ಬಿ) ಶಾನುಭೋಗರು

ಸಿ) ಬೆಕ್ಕು

ಡಿ) ರೈತರು

**15. ಕಲುಷಿತವಾದೀ ನದೀ ಜಲಗಳಿಗೆ ಏನಾಗಬೇಕು?**

ಎ) ಮುಂಗಾರಿನ ಮಳೆ

ಬಿ) ಬೇಸಿಗೆಯ ಬಿಸಿಲು

ಸಿ) ಹಸುರು

ಡಿ) ಕನಸಾಗಬೇಕು.

**16. ಹಕ್ಕಿಯ ಕಣ್ಣುಗಳು;**

ಎ) ನೀಲ – ಮೇಘ

ಬಿ) ರಾಜ್ಯ – ಸಾಮ್ರಾಜ್ಯ

ಸಿ) ಚಂದ್ರಲೋಕ – ಮಂಗಳಲೋಕ

ಡಿ) ಸೂರ್ಯ– ಚಂದ್ರ

**17. ಆಶ್ವಯುಜದ ಭತ್ತದ ಗದ್ದೆಯ ಬಣ್ಣ ಯಾವ ಹಸಿರಿನಂತಿದೆ ?**

ಎ) ಗಿಳಿಯ ಹಸುರಿನಂತೆ

ಬಿ) ಮಕಮಲ್ಲಿನ ಹಸುರಿನಂತೆ

ಸಿ) ಹಕ್ಕಿಯ ಹಸಿರಿನಂತೆ

ಡಿ) ಹೂವಿನ ಹಸಿರಿನಂತೆ

**18. ಒಡೆಯನ ಮನೆಯ ಮುಂದೆ ಯಾವ ಮರಗಳು ಮೈದುಂಬಿ ನಿಂತಿವೆ ?**

ಎ) ಮಾವಿನ ಮರಗಳು

ಬಿ) ಆಲದ ಮರಗಳು

ಸಿ) ಕದಳಿಮರಗಳು

ಡಿ) ಸೀಬೆಯ ಮರಗಳು

**19. ಮುದುಕಿಯ ರಾಹಿಲನನ್ನು ರಕ್ಷಿಸಿದ್ದು ಹೇಗೆ?**

ಎ) ಸೊಸೆ ಮಲಗಿದ್ದ ಮಂಚದಡಿ ಕಳುಹಿಸಿ ರಕ್ಷಿಸಿದಳು.

ಬಿ) ಮನೆಯಿಂದ ಹೊರಗಡೆ ಕಳುಹಿಸಿ ರಕ್ಷಿಸಿದಳು.

ಸಿ) ಆತ ತನ್ನ ಮಗನೆಂದು ಹೇಳಿ ರಕ್ಷಿಸಿದಳು.

ಡಿ) ಮನೆಯನ್ನು ಕತ್ತಲು ಮಾಡಿ ರಕ್ಷಿಸಿದಳು.

**20. ಶಬರಿ ರಾಮನಿಗಾಗಿ ಏನನ್ನು ಸಂಗ್ರಹಿಸಿದ್ದಳು?**

ಎ) ಹೂವು, ಹಣ್ಣು–ಹಂಪಲು, ಮಧುಪರ್ಕ.

ಬಿ) ವಚನಗಳ ಪುಸ್ತಕ ಮತ್ತು ಕಿರ್ದಿಪುಸ್ತಕ

ಸಿ) ಹೊನ್ನು

ಡಿ) ಕುದುರೆ, ಬಿಲ್ಲು–ಬಾಣಗಳು

**21. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ;**

ಎ) ಕ್ರಿಯೆಯ ಅನುಭವದಿಂದ ಮೂಡಿದ ತಿಳಿವಳಿಕೆ.

ಬಿ) ತನ್ನಷ್ಟಕ್ಕೆ ತಾನೇ ಇರುವ ತಿಳಿವಳಿಕೆ.

ಸಿ) ಕೇಳಿ ತಿಳಿದುಕೊಂಡದ್ದು.

ಡಿ) ಅದೊಂದು ತರ್ಕ.

**22. ಧರ್ಮಬುದ್ಧಿಗೆ, ದುಷ್ಟಬುದ್ಧಿಯು ಯಾವ ಸಲಹೆ ಇತ್ತನು?**

ಎ) ಈ ಹೊನ್ನನ್ನು ದಾನ ಮಾಡೋಣ.

ಬಿ) ಹೊನ್ನನ್ನು ಧರ್ಮಾಧಿಕರಣರಿಗೆ ಒಪ್ಪಿಸೋಣ.

ಸಿ) ಇಬ್ಬರೂ ಹೊನ್ನನ್ನು ಹಂಚಿಕೊಳ್ಳೋಣ.

ಡಿ) ಕರ್ಚಿಗೆ ತಕ್ಕಷ್ಟು ಹೊನ್ನನ್ನು ತೆಗೆದುಕೊಂಡು ಉಳಿದ ಹೊನ್ನನ್ನು ಇಲ್ಲಿಯೇ ಇಡೋಣ.

**23. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?**

ಎ) ಮತಪಂಥಗಳೆಲ್ಲವೂ ನಮ್ಮ ಉತ್ತಮ ಜೀವನವನ್ನು ಹಾಳುಮಾಡಬಲ್ಲ ಮಾರ್ಗಗಳೆಂದು ತಿಳಿದು ಎಚ್ಚರಿಕೆಯಲ್ಲಿ ನಾವು ಬದುಕಬೇಕು.

ಬಿ) ಮತಪಂಥಗಳೆಲ್ಲವೂ ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲ ಮಾರ್ಗಗಳೆಂದು ತಿಳಿದು ಎಚ್ಚರಿಕೆಯಲ್ಲಿ ನಾವು ಬದುಕಬೇಕು.

ಸಿ) ಮತಪಂಥಗಳೆಲ್ಲವೂ ಸನ್ಮಾರ್ಗಕ್ಕೆ ಕರೆದುಕೊಂಡು ಹೋಗುವ ಮಾರ್ಗಗಳಾಗಿರಲಾರವು ಎಂದು ತಿಳಿದು ಎಚ್ಚರಿಕೆಯಲ್ಲಿ ನಾವು ಬದುಕಬೇಕು

ಡಿ) ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ, ಕನಸ್ಸನ್ನು ಬಿತ್ತಲಾರವು ಎಂದು ಬದುಕು ನಡೆಸಬೇಕು.

**24. ಕುಂತಿ, ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?**

ಎ) ಕರ್ಣ, ಧರ್ಮರಾಯ, ಭೀಮ, ಅರ್ಜುನ, ನಕುಲ–ಸಹದೇವ.

ಬಿ) ವಶಿಷ್ಠ ಮಹರ್ಷಿಗಳು

ಸಿ) ಸೂರ್ಯ, ಯಮ, ವಾಯು, ಇಂದ್ರ, ಮತ್ತು ಅಶ್ವಿನಿ ದೇವತೆಗಳು.

ಡಿ) ಶಿವ–ಪಾರ್ವತಿ

**25. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿದ್ದ ಬರೆಹ;**

ಎ) ಭೂಮಂಡಲದಲ್ಲಿ ರಾಮನೊಬ್ಬನೆ ವೀರನು ಆತನ ಯಜ್ಞತುರಗಮಿದು.

ಬಿ) ಭೂಮಂಡಲದಲ್ಲಿ ಲವನೊಬ್ಬನೆ ವೀರನು ಆತನ ಯಜ್ಞತುರಗಮಿದು.

ಸಿ) ಭೂಮಂಡಲದಲ್ಲಿ ಅರ್ಜುನನೊಬ್ಬನೆ ವೀರನು ಆತನ ಯಜ್ಞತುರಗಮಿದು.

ಡಿ) ಭೂಮಂಡಲದಲ್ಲಿ ಕೃಷ್ಣನೊಬ್ಬನೆ ವೀರನು ಆತನ ಯಜ್ಞತುರಗಮಿದು.

**26. ಕೋಮುವಾದವೂ ಯಾವ ಅಂಶಗಳನ್ನು ಶ್ರೇಷ್ಠವೆಂದು ನಂಬಿಸುತ್ತದೆ ;**

ಎ) ಸಮತಾವಾದವನ್ನು

ಬಿ) ಅರಾಜಕವಾದವನ್ನು

ಸಿ) ಏಕಧರ್ಮ ಮತ್ತು ಏಕ ಸಂಸ್ಕೃತಿಯನ್ನು

ಡಿ) ಮನುಷ್ಯತ್ವದ ಮಹಿಮೆಯನ್ನು

**27. ಭಗತ್ ಸಿಂಗ್ ಬ್ರಿಟೀಷ್ ಸರಕಾರದ ವಿರುದ್ಧ ಸೇಡು ತೀರಿಸಿಕೊಂಡದ್ದರ ಫಲ;**

ಎ) ಪರಮವೀರ ಚಕ್ರ ದೊರೆತದ್ದು

ಬಿ) ಜೇಮ್ಸ್ ಬರ್ಕ್ಲಿ ಬಹುಮಾನಕ್ಕೆ ಪಾತ್ರವಾಗಿದ್ದು

ಸಿ) ಪದ್ಮಶ್ರೀ ಪ್ರಶಸ್ತಿ ದೊರೆತದ್ದು

ಡಿ) ಮರಣದಂಡನೆಗೆ ಈಡಾಗಿದ್ದು

**28. ಬದಿಯಲ್ಲಿ ಹುಟ್ಟೋದು ಬದಿನಲ್ಲಿ ಬೆಳೆಯೋದು ಹೋಗೋರ ಮುಂಚೆರಗ ಹಿಡಿಯೋದು ಯಾರು ?**

ಎ) ಗರಿಕೆಯ ಹುಲ್ಲು

ಬಿ) ಹಾವು

ಸಿ) ಉತ್ತರಾಣಿ ಗಿಡ

ಡಿ) ತಾವರೆ ಬೇರು

**29. "ತಾವು ಕಡಿಮೆ ಮಾತನಾಡಿದ್ದೀರಿ ; ಹೆಚ್ಚು ಕೆಲಸ ಮಾಡಿದ್ದೀರಿ " – ಈ ವಾಕ್ಯವನ್ನು ಯಾರು ಯಾರನ್ನು ಕುರಿತು ಹೇಳಿದ್ದಾಗಿದೆ ?**

ಎ) ಜವಾಹರ್ ಲಾಲ್ ನೆಹರು – ವಿಶ್ವೇಶ್ವರಯ್ಯನವರನ್ನು ಕುರಿತು ಹೇಳಿದ್ದಾಗಿದೆ.

ಬಿ) ಕೃಷ್ಣನು – ಕರ್ಣನನ್ನು ಕುರಿತು ಹೇಳಿದ್ದಾಗಿದೆ.

ಸಿ) ಜವಾಹರ್ ಲಾಲ್ ನೆಹರು – ನಾಲ್ವಡಿ ಕೃಷ್ಣರಾಜ ಒಡೆಯರನ್ನು ಕುರಿತು ಹೇಳಿದ್ದಾಗಿದೆ.

ಡಿ) ರಾಹಿಲ್ ಮುದುಕಿಯನ್ನು ಕುರಿತು ಹೇಳಿದ್ದಾಗಿದೆ.

**30. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ" ಈ ಮಾತನ್ನು ಯಾರು ಯಾರಿಗೆ ಹೇಳಿದರು ?**

ಎ) ಮನೆ ಮಂಚಮ್ಮ – ಗ್ರಾಮದ ಜನರಿಗೆ

ಬಿ) ಮನೆಮಂಚಮ್ಮ – ವಚನಕಾರರಿಗೆ

ಸಿ) ಮನೆಮಂಚಮ್ಮ – ಕವಿ ಸಿದ್ಧಲಿಂಗಯ್ಯಗೆ

ಡಿ) ಬುದ್ಧ – ಮನೆಮಂಚಮ್ಮನಿಗೆ

**31. ಹುಸಿಯದ ಬೇಹಾರಿಯೇ ಇಲ್ಲ – ಈ ವಾಕ್ಯವನ್ನು ಹೇಳಿದವರು**

ಎ) ದುಷ್ಟಬುದ್ಧಿ

ಬಿ) ಧರ್ಮಬುದ್ಧಿ

ಸಿ) ಧರ್ಮಾಧಿಕರಣರು

ಡಿ) ವಟವೃಕ್ಷ

**32 "ಮೋಸ ಮಾಡಿ ನಮ ದೇಶ ಗೆದಿತಾರೋ ಮುಂದ ನಮಗ ಘೋರ" ಈ ಮಾತನ್ನು ಯಾರು ಯಾರನ್ನು ಕುರಿತು ಹೇಳಲಾಗಿದೆ ?**

ಎ) ಕರ್ಣ – ಕೃಷ್ಣನನ್ನು ಕುರಿತು ಹೇಳುತ್ತಾನೆ.

ಬಿ) ಹೆಬಲಕ್ ಬ್ರಿಟಿಷರನ್ನು ಕುರಿತು ಹೇಳಿದನು.

ಸಿ) ಹನುಮ ಬ್ರಿಟಿಷರನ್ನು ಕುರಿತು ಹೇಳಿದನು.

ಡಿ) ಜಡಗ ಬ್ರಿಟಿಷರನ್ನು ಕುರಿತು ಹೇಳಿದನು.

**33 'ಈ ವಾಕ್ಯವನ್ನು 'ಕುಮಾರವ್ಯಾಸ' ವಿರಚಿತ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ**

ಎ) "ಜೀಯ ಹಸಾದವೆಂಬುದು ಕಷ್ಟ"

ಬಿ) "ಸಿಡಿಲು ಸಿಡಿದಾಂಗ ಗುಂಡು ಸುರಿದಾವ"

ಸಿ) "ಸಮರದೊಳಗಜ್ಜ ಪೇಳಿಮಾವುದು ಕಜ್ಜ"

ಡಿ) "ಸ್ವಧರ್ಮೇ ನಿಧನಂ ಶ್ರೇಯಃ"

**34 'ಮೇಣಾಯ್ತು ಕೌರವಂಗವನೀತಳಂ' ಈ ಮಾತನ್ನು ಯಾರು ಹೇಳಿದರು?**

ಎ) ದುರ್ಯೋಧನ

ಬಿ) ಭೀಮ

ಸಿ) ಭೀಷ್ಮ

ಡಿ) ಧರ್ಮರಾಯ

**35. ಎ.ಎನ್. ಮೂರ್ತಿರಾವ್ ರವರ ಜನ್ಮ ಸ್ಥಳ;**

ಎ) ಮಂಡ್ಯ ಜಿಲ್ಲೆಯ ಮೇಲುಕೋಟೆ

ಬಿ) ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು

ಸಿ) ಗದಗ ಜಿಲ್ಲೆಯ ಕೋಳಿವಾಡ

ಡಿ) ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ

**36. ಕವಿ ಕುವೆಂಪುರವರ ಕೃತಿಗಳು;**

ಎ) ಶಬರಿ– ಅಹಲ್ಯೆ

ಬಿ) ಸಾಹಸಭೀಮ ವಿಜಯ– ಮೆರವಣಿಗೆ

ಸಿ) ಗರಿ–ನಾದಲೀಲೆ

ಡಿ) ಶ್ರೀರಾಮಾಯಣ ದರ್ಶನಂ–ಪಕ್ಷಿಕಾಶಿ

**37 ಯುಗಯುಗಗಳ ಹಣೆಬರೆಹವ ಒರೆಸಿ – ಇದರ ಮುಂದಿನ ಸಾಲು;**

ಎ) ಮಂಡಲ– ಗಿಂಡಲಗಳ ಗಡ ಮುಕ್ಕಿ

ಬಿ) ಮುಗಿಲಿಗೆ ರೆಕ್ಕೆಗಳೊಡದವೋ ಅಣ್ಣ

ಸಿ) ಮನ್ವಂತರಗಳ ಭಾಗ್ಯವ ತೆರೆಸಿ

ಡಿ) ಬಿಳಿ–ಹೊಳೆ ಬಣ್ಣದ ಗರಿ ಗರಿಯುಂಟು

**38 ಛಲಮನೆ ಮೆರೆವೆಂ–ಪದ್ಯದಲ್ಲಿನ ಮುಖ್ಯವಾದ ಮೌಲ್ಯ;**

ಎ) ದುರ್ಯೋಧನನ ಛಲ

ಬಿ) ಕರ್ಣನ ಆಮೀಷ

ಸಿ) ಶಬರಿಯ ತಾಳ್ಮೆ

ಡಿ) ಲವನ ಶೌರ್ಯ

**39. ಮಾತು ಬಲ್ಲವನಿಗೆ ಜಗಳವಿಲ್ಲ ; .. .. ಈ ಗಾದೆಯನ್ನು ಪೂರ್ಣಗೊಳಿಸಿ;**

ಎ) ಊಟ ಬಲ್ಲವನಿಗೆ ರೋಗವಿಲ್ಲ

ಬಿ) ಊಟ ಬಲ್ಲವನಿಗೆ ಹಲ್ಲಿಲ್ಲ

ಸಿ) ಊಟ ಬಲ್ಲವನಿಗೆ ರುಚಿಯಿಲ್ಲ

ಡಿ) ಆಳ–ಾಗಲವಿಲ್ಲ

**40. "ತೀರ್ಥರೂಪ" ಸಂಬೋಧನಾ ಪದವನ್ನು ಇವರಿಗೆ ಪತ್ರ ಬರೆಯುವಾಗ ಉಪಯೋಗಿಸಲಾಗುತ್ತದೆ.**

ಎ) ತಂದೆ

ಬಿ) ತಾಯಿ

ಸಿ) ಅಣ್ಣ

ಡಿ) ಸ್ನೇಹಿತ

# Success Academy. AFRID.
## Mission A+
## ಕನ್ನಡ - ಪತ್ರಿಕೆ - 01

1) ಡಿ> 6

| ನೆನಪಿಡಿ :- ಕನ್ನಡ ವರ್ಣಮಾಲೆಯಲ್ಲಿರುವ.. | |
|---|---|
| ಒಟ್ಟು ಮೂಲಾಕ್ಷರಗಳು------------೪೯ | * ಒಟ್ಟು ಅವರ್ಗೀಯ ವ್ಯಂಜನಾಕ್ಷರಗಳು--೦೯ |
| ಒಟ್ಟು ಸ್ವರಾಕ್ಷರಗಳು-------------- ೧೩ | * ಒಟ್ಟು ಅಲ್ಪ ಪ್ರಾಣ ವ್ಯಂಜನಾಕ್ಷರಗಳು-೧೦ |
| ಒಟ್ಟು ಹ್ರಸ್ವ ಸ್ವರಾಕ್ಷರಗಳು-------- ೦೬ | * ಒಟ್ಟು ಮಹಾ ಪ್ರಾಣ ವ್ಯಂಜನಾಕ್ಷರಗಳು-೧೦ |
| ಒಟ್ಟು ದೀರ್ಘ ಸ್ವರಾಕ್ಷರಗಳು-------- ೦೭ | * ಒಟ್ಟು ಅನುನಾಸಿಕ ಅಕ್ಷರಗಳು--------೦೫ |
| ಒಟ್ಟು ವ್ಯಂಜನಾಕ್ಷರಗಳು----------- ೩೪ | * ಒಟ್ಟು ಯೋಗವಾಹಗಳು-----------೦೨ |
| ಒಟ್ಟು ವರ್ಗೀಯ ವ್ಯಂಜನಾಕ್ಷರಗಳು--೨೫ | * ಅನುಸ್ವಾರ--------------------೦೧ |
| | * ವಿಸರ್ಗ---------------------೦೧ |

2) ಬಿ> ಊರೂರು -> ಊರು + ಊರು 'ಊ' ಸ್ವರ ಲೋಪ
ಲೋಪಸಂಧಿ.

3) ಬೆಟ್ಟದ + ತಾವರೆ = ಬೆಟ್ಟದಾವರೆ
ಎ> ತತ್ಪುರುಷ ಸಮಾಸ

4) ಬಳೆಗಾರ.
ಎ> ತದ್ಧಿತಾಂತ ನಾಮ : ಗಾರ, ಕಾರ, ಇಗ, ವಂತ
ಉದಾ: ಪಾರುಗಾರ, ಛಲಗಾರ, ಮೋಸಗಾರ

5) ಡಿ> ಆತನು

6) ಸಿ> ವಾಕ್ಯವೇಷ್ಟನ ಚಿಹ್ನೆ

**ಪೂರ್ಣ ವಿರಾಮ : (.)** ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಪೂರ್ಣವಿರಾಮ ಚಿಹ್ನೆಯನ್ನು ಬಳಸಬೇಕು.
ಉದಾ :- ವಿದ್ಯಾರ್ಥಿಗಳು ಪದ್ಯವನ್ನು ಹಾಡುತ್ತಾರೆ.

**ಅರ್ಧ ವಿರಾಮ : (;)** ಅನೇಕ ಉಪವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು.
ಉದಾ :- ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ.

**ಅಲ್ಪವಿರಾಮ : (,)** ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇ?ಣ ಬಿಟ್ಟು ಉಳಿದವುಗಳ ಮುಂದೆ ಅಲ್ಪವಿರಾಮ ಬಳಸಬೇಕು.
ಉದಾ :- ಬಟ್ಟೆಗಿರಣಿ, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ.

**ಪ್ರಶ್ನಾರ್ಥಕ : (?)** ಪ್ರಶ್ನೆರೂಪದ ಪದ ಮತ್ತು ವಾಕ್ಯಗಳ ಮುಂದೆ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಲಾಗುವುದು.
ಉದಾ :- ನಿನ್ನ ಹೆಸರೇನು ?

**ಭಾವಸೂಚಕ : (!)** ಹರ್ಷ, ಆಶ್ಚರ್ಯ, ಸಂತೋಷ, ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು.
ಉದಾ :- ಅಬ್ಬಾ! ಈ ಜಲಪಾತ ಎಷ್ಟೊಂದು ರಭಸವಾಗಿ ಬೀಳುತ್ತಿದೆ!

**ಉದ್ಧರಣ ಚಿಹ್ನೆ : (" ")** ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.
ಉದಾ :- "ಶಿಕ್ಷಣವು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ದ ಹಕ್ಕಾಗಬೇಕು" ಎಂದು ಸರ್ ಎಂ. ವಿಶ್ವೇಶ್ವರಯ್ಯನವರು ಹೇಳಿದರು.

**ವಾಕ್ಯವೇಷ್ಟನ ಚಿಹ್ನೆ : (' ')** ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು.
ಉದಾ :- ಕನ್ನಡ ಭಾಷೆಯಲ್ಲಿ 'ಇಂಗ್ಲಿಷ್', 'ಪರ್ಷಿಯನ್ ', 'ಪೆರ್ಚ್‌ಗೀಸ್ ' ಭಾಷೆಗಳ ಪದಗಳನ್ನು ಬಳಸಲಾಗುತ್ತದೆ.

**ಆವರಣ ಚಿಹ್ನೆ : ( )** ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ.
ಉದಾ :- ನೀರನ್ನು ವಿಭಜಿಸಿದರೆ ಆಮ್ಲಜನಕ (ಆಕ್ಸಿಜನ್) ಜಲಜನಕ (ಹೈಡ್ರೋಜನ್)ಗಳು ಉತ್ಪತ್ತಿಯಾಗುತ್ತವೆ.

**ವಿವರಣಾತ್ಮಕ ಚಿಹ್ನೆ : (:)** ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.
ಉದಾ :- ಪಂಚಮಹಾವಾದ್ಯಗಳು : ತಾಳ, ಹಳಗ, ಗಂಟೆ, ಮೌರಿ, ಸನಾದಿ.

07 ಡಿ) ಚೆನ್ನಾಗಿರು

08 ಸಿ) ಅನುಕರಣಾವ್ಯಯ

09 ಬಿ) ಉಪಮಾಲಂಕಾರ

10 ಎ) 4 ಕಂದಪದ್ಯ - 4 ಸಾಲುಗಳ ಪದ್ಯ

11 ಬಿ) ವಿಮಾನ ದಾಳಿಯಿಂದ ತಪ್ಪಿಸಿಕೊಳ್ಳಲು

12 ಎ) ದನು ಮಹರ್ಷಿ

13 ಡಿ) ಶಿವನ ಸಮುದ್ರ

14 ಎ) ಹುಲಿ

15 ಎ) ಮುಂಗಾರಿನ ಮಳೆ

16 ಡಿ) ಸೂರ್ಯ - ಚಂದ್ರ

17 ಎ) ಗಿಳಿಯ ಹಸುರಿನಂತೆ.

18

19 ಎ) ಸೀತೆ ಮಲಗಿದ್ದ ಮಂಚದಡಿ ಕಳುಹಿಸಿ ರಕ್ಷಿಸಿದಳು

20 ಎ) ಹೂವು, ಹಣ್ಣು - ಹಂಪಲು, ಮಧುಪರ್ಕ

21 ಬಿ) ತನ್ನಷ್ಟಕ್ಕೆ ತಾನೇ ಇರುವ ತಿಳುವಳಿಕೆ.

22 ಡಿ) ಕಟಿಂಗೆ ತಕ್ಕಷ್ಟು ಹೊನ್ನನ್ನು ತೆಗೆದುಕೊಂಡು
ಉಳಿದ ಹೊನ್ನನ್ನು ಇಲ್ಲಿಯೇ ಇಡೋಣ.

23 ಡಿ) ಭಯ ಸಂಶಯಗಳಿಂದ ಮುಸುಕಾಗಿರುವ
ಮನದ ಕಣ್ಣಿನಲ್ಲಿ ಭವಿಷ್ಯದ ಕನಸನ್ನು ಬಿತ್ತಿರಾರವು
ಎಂದು ಬದುಕು ನಡೆಸಬೇಕು

24 ಸಿ) ಸೂರ್ಯ, ಯಮ, ವಾಯು, ಇಂದ್ರ
ಮತ್ತು ಅಶ್ವಿನಿ ದೇವತೆಗಳು.

25 ಎ) ಭೂಮಂಡಲದಲ್ಲಿ ರಾಮನೊಬ್ಬನೆ ವೀರನು
ಆತನ ಯಜ್ಞತುರಗವಿದು.

26 ಸಿ) ಏಕಧರ್ಮ ಮತ್ತು ಏಕ ಸಂಸ್ಕೃತಿಯನ್ನು

27 ಡಿ) ಮರಣದಂಡನೆಗೆ ಈಡಾಗಿದ್ದು

28 ~~ಡಿ) ಜೇಡರ ಬ್ರಹ್ಮೇಶ್ವರನ್ನು ಕುರಿತು ಹೇಳಿದನು.~~
ಸಿ) ಉತ್ತರಾಣಿ ಗಿಡ

29 ಎ) ಜವಾಹರ್ ಲಾಲ್ ನೆಹರು -
ವಿಶ್ವೇಶ್ವರಯ್ಯನವರನ್ನು ಕುರಿತು ಹೇಳಿದರು.

30 ಎ) ಮನೆ ಮಂಚಪ್ಪ - ಗ್ರಾಮದ ಜನರಿಗೆ.

31 ಬಿ) ಧರ್ಮಬುದ್ಧಿ

32 ಡಿ) ಜಡೆಗ ಬ್ರಿಟಿಷರನ್ನು ಕುರಿತು ಹೇಳಿದನು.

33 ಎ) 'ಜೀಯ ಹಸಾದವೆಂಬುದು ಕಷ್ಟ'

34 ಎ) ದುರ್ಯೋಧನ

35 ಎ) ಮಂಡ್ಯ ಜಿಲ್ಲೆಯ ಮೇಲುಕೋಟೆ

36 ಡಿ) ಶ್ರೀರಾಮಾಯಣ ದರ್ಶನಂ - ~~ಪಕ್ಷಿಸಾಕ್ಷಿ~~ ಪಕ್ಷಿಕಾಶಿ.

37 ಸಿ) ಮನ್ವಂತರಗಳ ಭಾಗ್ಯವ ತೆರೆಸಿ.

38. ಎ) ದುರ್ಯೋಧನನ ಛಲ

39. ಎ) ಊಟ ಬಲ್ಲವನಿಗೆ ರೋಗವಿಲ್ಲ

40 ಎ) ತಂದೆ.

Subscribe - Yotube Channel.

Success Academy AFRID. Sir.

Thank you.

**All the best**